ಎಲ್ಲ ಬರ್ಕಂಡು ಹೆಸರಿನ ಜಾಗದಲ್ಲಿ ಕೇವಲ ಗಂಡು ಎಂದು ಮಾತ್ರವಿದ್ದುದರಿಂದ ಹೆಸರೇನು ಅಂತ ಕೇಳಿರು. ಕರಿಯವ್ವ 'ತಿಪ್ಪು' ಎನ್ನಲು. ಮೊಮ್ಮಗ, 'ಟಿಪ್ಪು ಸುಲ್ತಾನ್' ಎಂದ. ಗೊಂದಲಕ್ಕೆ ಬಿದ್ದ ಹೆಡ್ ಮಾಷ್ಟ್ರು ಮತ್ತೊಮ್ಮೆ ಅಜ್ಜಿಯನ್ನು ಕೇಳಿದಾಗ. ಈಗ ನಂಜವ್ವ ಊ ಸಾಮಿ ಇವ್ನೆಸ್ರು ಅಂಗಂತಲೆಯ ಅವ್ರಪ್ಪ ಇಕ್ಕಿರದು ಎಂದಳು. 'ನೋಡಜ್ಜಿ ಸ್ಕೂಲಿಗೆ ಸೇರುಸ್ಬೇಕಾದ್ರೆ ಕರಕ್ಟಗೆ ಹೇಳ್ಬೇಕು. ಇದು ರೆಕಾರ್ಡ್ ಆಗುತ್ತೆ ಮುಂದುಕ್ಕೆ ಇದೆ ಬರದು' ಎಂದರು. 'ಯಂಗ ಸಾಮಿ ನಮ್ಮ ಅಳಿಮಯ್ಯುನ್ನ ಒಂದ್ ಮಾತ ಕೇಳಿ' ಎಂದು ಎಲಾಡ್ಕೆ ಚೀಲದಲ್ಲಿ ಬರ್ದಿಟ್ಕಂಡಿದ್ದ ಚೀಟಿ ತೋರಿಳು. ಅದರಲ್ಲಿದ್ದ ನಂಬರ್‌ಗೆ ಹೆಡ್ ಮಾಷ್ಟ್ರು ತಮ್ಮ ಫೋನಿಂದಲೇ ಕರೆ ಮಾಡಿರು. ಆಕಡೆಯಿಂದ ಆ ಹೆಸರಿನ ಮೇಲೆ ಬಲು ವ್ಯಾಮೋಹಿಯಾಗಿದ್ದ ದುರ್ಗಯ್ಯ 'ಇಲ್ಲ ಸ್ವಾಮಿ ಅವ್ನ ಹೆಸ್ರು ಟಿಪ್ಪು ಸುಲ್ತಾನ್ ಅಂತಲೆಯ, ಅಂಗಂತಲೆ ಬರ್ಕಳಿ' ಅಂದು ಕಡ್ಡಿ ಎರ್ಡು ತುಂಡ್ ಮಾಡ್ದ. ವಾದ ಮಾಡಿ ಸೋತ ಹೆಡ್ ಮೇಷ್ಟ್ರು ಕೊನಿಗೆ ಯಾವ ಜಾತಿ ಆದ್ರೇನು, ಹೆಸರಾದ್ರೇನು ನಮ್ಮ ಸ್ಕೂಲ್ ಸ್ಟ್ರೆಂತ್ ಹೆಚ್ಚಾಗಿ ನಾನುಳ್ಕಂಡ್ರೆ ಸಾಕು ಅಂತ ಅಂಗಂತಲೆ ಬರ್ಕಂಡ್ರು. ಅಂದಿನಿಂದ ಮೊಮ್ಮಗ ಅಧಿಕೃತವಾಗಿ ಟಿಪ್ಪು ಸುಲ್ತಾನ್ ಆದ.

ಇಂಗೆ ಸ್ಕೂಲಿಗೆ ಹೋಗ್ತಲು ಬತ್ತಲು ಇರುವಾಗ ಇದ್ದಿದ್ದಂಗೆ ಒಂದಿಸ ಹೆಡ್ ಮೇಷ್ಟ್ರು ನಂಜವ್ವುಂಗೆ ಹೇಳಿ ಕಳಿಸಿರು. ಯಾಕೊ, ಏನೊ ಅಂತ ದಡುಗ ತಗಂಡು ಒಂದೇ ಉಸಿರಿಗೆ ಹೋದಾಗ, 'ನೋಡಮ್ಮ ನಿನ್ನ ಮೊಮ್ಮಗಂಗೆ ಆಧಾರ್ ಕಾರ್ಡ್ ಮಾಡುಸ್ಬೇಕು, ಅದ್ನ ಈಗ ಕಡ್ಡಾಯ ಮಾಡೆವ್ರೆ, ನಾಳೆನೆ ಹಿರಿಯೂರಿಗೆ ಹೋಗಿ ಮಾಡಿಸ್ಕೆಂಡು ಬರ್ರಿ' ಎಂದರು. ಅದರಂತೆ ನಂಜವ್ವ ಮೊಮ್ಮಗನ್ನ ಕರ್ಕಂಡು ಹಿರಿಯೂರ್‍ನಲ್ಲಿ ಇಳಿದು, ಅವ್ರಿವುರ್ನ ಕೇಳ್ಕೆಂಡು ನಾಡ ಕಚೇರಿ ತಲ್ಪಿಳು. ಅಲ್ಲಿ ಈ ಕಾಲದ ಕೆಲ ಹುಡುಗ ಹುಡುಗಿಯರು ಫೋಟೊ ತೆಗೆಯದು, ಹೆಬ್ಬೆಟ್ ಒತ್ತಿಸ್ಕೆಣದು ಮಾಡ್ತಿದ್ರು. ಟಿಪ್ಪುವಿನ ಸರ್ದಿ ಬಂದಾಗ ಮಾಮೂಲಿನಂತೆ ಅಪ್ಪುಂದು ಅವ್ವುಂದು ಹೆಸರೆಲ್ಲ ಕೇಳಿಯಾದ ಮೇಲೆ ಅಭ್ಯರ್ಥಿದ್ನ ಕೇಳಿ ಔಹಾರಿ ಬಿದ್ರು. ಈ ಹೆಸರಿಗೂ ಅಪ್ಪ ಅವ್ವನ ಹೆಸರಿಗೂ ಮ್ಯಾಚ್ ಆಗ್ದೆ ಹೋದ್ರೆ ಕಂಪ್ಯೂಟ್ರು ಯಾವ ಕಾರಣಕ್ಕು ತಗಣಲ್ಲ ಅಂತ ಹೇಳಿದ್ದು ಮಾತ್ರವಲ್ಲದೆ ಅಕ್ಕಪಕ್ಕದವರನ್ನೂ ಕರ್ದು ಹಾಸ್ಯ ಮಾಡಿ ಕರಿಯವ್ವನಿಗೆ ದಿಗಿಲು ಹುಟ್ಟಿಸಿರು. ಅದಕ್ಕೆ ತಕ್ಕಂತೆ ಅದೆ ಟೈಮಿಗೆ ಸರ್ವರ್ ಬ್ಯುಸಿ ಬೇರೆ. 'ಯಂಗ ನೋಡಿ ಮಾಡಿಕೊಡಿ ಸಾಮಿ' ಎಂದು ನಂಜವ್ವ ಕೈ ಕೈ ಮುಗಿಯುವಾಗ ಮೊಮ್ಮಗ ಟಿಪ್ಪು ಬೆಪ್ಪಾದವನಂತೆ ಅಜ್ಜಿನೆ ನೋಡ್ತಿದ್ದ. ಕಂಪ್ಯೂಟ್ರಿಗೆ ಮನುಷ್ಯರು ಮಾಡ್ಕೆಂಡಿರದು ತಿಳಿಯುತ್ತದೆಯೇ... ಅರ್ಜಿ ಸ್ವೀಕೃತ ಆಗೇ ಬಿಟ್ಟಿತು. ತಾಂತ್ರಿಕ ಪರಿಣತ ಆಧುನಿಕ ಹುಡುಗರು ತಮ್ಮ ಎಳೆಸುತನಕ್ಕೆ ಅಂಗಂಗೆ ಸುಮ್ನಾದ್ರು. ನಂಜವ್ವ ನಿಟ್ಟುಸಿರು ಬಿಟ್ಟು ಊರ ದಾರಿ ಹಿಡಿದ್ಲು.

ಮಗ್ಗಿ ಕಾಗುಣಿತ ಎಲ್ಲದ್ರಲೂ ಮುಂದಿದ್ದ ಟಿಪ್ಪುಗೆ ತನ್ನ ಹಟ್ಟಿಯ ಮಂಜ, ಮಾರುತಿಯರ ವಡನಾಟದಷ್ಟೆ ಊರಳ್ಳರ ಭರತ, ತೇಜಸ್ವಿನಿ, ಪವನರ ಜೊತೆಗೂ ಇತ್ತು. ಇವರ ಆಟದ ಕ್ಷೇತ್ರಗಳು ದಿನೆ ದಿನೆ ತಮ್ಮ ಹಟ್ಟಿಯ ಹಿತ್ತಲ ಮನೆ, ಕೊಟ್ಗೆಮನೆ, ಸೊಂಪ್ಪುಗಳು ದಾಟಿ ಸಾರ್ವಜನಿಕ ಕೆರೆ ರಸ್ತೆಗಳನ್ನೂ ಮೀರಿ ಊರೊಳ್ಳರ ದೇವಸ್ಥಾನದ ಹಿಂಬದಿ, ಪಟೇಲ್ರ ಮೊಮ್ಮಗ ತೇಜುವಿನ ಕೊಪ್ಲ ಹೊರೆಗೂ ವಿಸ್ತರಿಸಿತ್ತು. ಶನಿವಾರ ಭಾನ್ವಾರ ಬಂದ್ರಂತು ಅಜ್ಜಿ ನಂಜವ್ವನಿಗೆ ಮೊಮ್ಮಗನ್ನ ಹುಡ್ಕದೇ ಒಂದ್ ಕೆಲ್ಸ ಆಗಿರದು. ಊಟ ತಿಂಡಿನೂ ಲೆಕ್ಕಿಸದೆ ಬಸ್ ಬಿಡದು, ದೇವ್ರ ಕುಣಿಸದ್ರಲ್ಲಿ ಬ್ಯುಸಿ ಆಗಿರರು. ಆಗೆಲ್ಲ ಮಧ್ಯಾನ್ನೊತ್ತು ಬಿಸ್ಲಲ್ಲಿ ಆಡಿ ಸುಸ್ತಾಗಿರ ಹುಡುಗ್ರಿಗೆ ನೀರೇನಾದ್ರು ಕುಡಿಬೇಕು ಅನ್ಸಿರೆ, ಮೂಲೆ ಮನೆ ಭರತರ ಅಜ್ಜಿ ಒಳಗಿಂದ ತಂಬ್ಗೆಲಿ ನೀರ ತಂದು ಕಂಟಕ್ಕೆ ಚೂಪಾಗಿ ಅಂಗೈ ಕೊಟ್ಟು ಮೇಲಿಂದ ಬಗ್ಸಿರೆ ಹಟ್ಟಿ ಹುಡುಗ್ರು ಎರೆಡೂ ಕೈಯನ್ನ ವಾಳೆಯಾಗಿಸಿಕೊಂಡು ಗಂಟಲಿಗೆ